ಗ್ರಾಮಾಂತರ ಉದ್ಯಮಗಳು

155 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮೀಣ ಪ್ರದೇಶದಲ್ಲಿ ಕುಂಬಾರಿಕೆ, ಗಾಣಿಗಾರಿಕೆ, ಸುಣ್ಣಗಾರಿಕೆ, ಮೇದಾರಿಕೆ ಕೈಮಗ್ಗ, ಬಡಿಗತನ, ಕಮ್ಮಾರಿಕೆ ಚರ್ಮಗಾರಿಕೆ, ನೇಕಾರಿಗೆ ಮೊದಲಾದ ಉದ್ಯಮಗಳು ನಾಶವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಉದ್ಯಮಗಳನ್ನು ಉಳಿಸಲು ಹಾಗೂ ಪ್ರೋತ್ಸಾಹಿಸಲು ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ?

ಶ್ರೀ ಎನ್.ಎಂ. ನಬೀ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ವಿಶೇಷ ಘಟಕ ಯೋಜನೆ

150 - ಶ್ರೀ ಯು.ಬಿ. ಬಣಕಾರ್ (ಹಿರೇಕೇರೂರು) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಶೇಷ ಘಟಕ ಯೋಜನೆಯಲ್ಲಿ 91-92,92-93,93-94ರಲ್ಲಿ ಸರಕಾರ ನಿಗದಿಪಡಿಸಿದ, ಬಿಡುಗಡೆ ಮಾಡಿದ ಖರ್ಚು ಮಾಡಿದ ಖರ್ಚು ಮಾಡದೆ ಉಳಿಸಿದ ಹಣವೆಷ್ಟು

ಆ) ವಿಶೇಷ ಘಟಕ ಯೋಜನೆಯಲ್ಲಿ ಕೇಂದ್ರ ಸರ್ಕಾರ ಕೊಟ್ಟಿರುವ ಹಣ, ರಾಜ್ಯ ಸರ್ಕಾರವು ಕೊಡಬೇಕಾದ ಹಣ ಹಾಗೂ ರಾಜ್ಯ ಸರ್ಕಾರವು ಕೊಟ್ಟ ಹಣ 91-92,92-93 ಮತ್ತು 93-94ರಲ್ಲಿ ಎಷ್ಟು

ಇ) 1994-95 ರಲ್ಲಿ ಈ ಯೋಜನೆಯಲ್ಲಿ ಬಿಡುಗಡೆ ಮಾಡಿದ ಹಾಗೂ ಖರ್ಚು ಮಾಡಿದ ಹಣ 30-11-94ಕ್ಕೆ ಎಷ್ಟು?

ಶ್ರೀ ರಮೇಶ್ ಸಿ.ಜಿ ಗಜಿಣಗಿ (ಸಮಾಜಕಲ್ಯಾಣ ಸಚಿವರು) :

ಅ) 1991-92,1992-93, ಮತ್ತು 1993-94ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆಯ ರಾಜ್ಯ ಯೋಜನೆಯಡಿ ರಾಜ್ಯದ ಯೋಜನಾ ಇಲಾಖೆಯು ನಿಗದಿಗೊಳಿಸಿದ ಹಾಗೂ ವಿವಿಧ ಅಭಿವೃದ್ಧಿ ಇಲಾಖೆಗಳಿಂದ ಬಂದ ವರದಿಯ ಪ್ರಕಾರ ಬಿಡುಗಡೆ ಮಾಡಿದ ಮತ್ತು ಖರ್ಚು ಮಾಡಿದ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

ಕ್ರ ಸಂ	ವರ್ಷ	ನಿಗದಿಪಡಿಸಿ ಹಣ	ಬಿಡುಗಡೆ ಮಾಡಿದ ಹಣ	ಖರ್ಚುಮಾಡಿದ ಹಣ	ಖರ್ಚು ಮಾಡದೇ ಬಾಕಿ ಉಳಿದ ಹಣ
					ರೂ.ಲಕ್ಷಗಳಲ್ಲಿ
1.	1991-92	13851.14	13851.14	11013.60	2947.94
2.	1992-93	17602.07	17602.07	16049.17	3315.44
3.	1993-94	28069.49	28069.49	25893.95	4751.40

ಆ) 1991-92,1992-93 ಮತ್ತು 1993-94ರಲ್ಲಿ ಕೇಂದ್ರ ಸರ್ಕಾರದಿಂದ ಮಂಜೂರಾದ ವಿಶೇಷ ಕೇಂದ್ರೀಯ ನೆರವಿನಿಂದ ವಿವರಗಳು